**ಎಂ.ವಿ.ಸಿ ನಂ. 1456/2023**
**ಪಿಡಬ್ಲ್ಯೂ -1**

**(ಇಂದು ದಿನಾಂಕಃ 06-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)**

**ವಾಟೀ ಸವಾಲುಃ ಎದುರುದಾರರ ಪರ ಮಾನ್ಯ RSK ವಕೀಲರಿಂದಃ**

ಮೃತ ವ್ಯಕ್ತಿ ನನ್ನ ಗಂಡ. ಮೇ-08 ರಂದು ಅಪಘಾತವಾಗಿರುತ್ತದೆ. ಆ ದಿನ ನನ್ನ ಗಂಡ ಕಂಪನಿ ಕೆಲಸಕ್ಕೆ ಬೈಕ್ ಮೇಲೆ ಹೋಗಿರುತ್ತಾನೆ. ಅದರ ನಂಬರ ಹೇಳಲು ಬರುವುದಿಲ್ಲ. ನನ್ನ ಗಂಡನ ಚಾಲನಾ ಪರವಾನಿಗೆ ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಆತನ ಚಾಲನಾ ಪರವಾನಿಗೆ ಅಪಘಾತದ ಸಂದರ್ಭದಲ್ಲಿ ಕಳೆದು ಹೋಗಿರುತ್ತದೆ. ನನ್ನ ಗಂಡ ಬೈಕನ್ನು ಯಾವುದೇ ಚಾಲನಾ ಪರವಾನಿಗೆ ಇಲ್ಲದೆ ಚಲಾಯಿಸುತ್ತಿದ್ದ ಎಂದರೆ ಸರಿಯಲ್ಲ. ನನ್ನ ಗಂಡ ಭಕ್ತಂಪಳ್ಳಿಯಿಂದ ಸುಲೇಪೇಟಗೆ ಹೋಗುತ್ತಿದ್ದ. ನಿಪಿ-4 ರಲ್ಲಿ ನಮೂದಿಸಿದಂತೆ ಅಪಘಾತದಲ್ಲಿ ಮಧ್ಯೆ ರಸ್ತೆಯಲ್ಲಿ ಘಟಿಸಿರುತ್ತದೆ ಎಂದೂ ನಮೂದಿದೆ ಎಂದರೆ ಸರಿ. ಅಪಘಾತವು ಮುಖಾ-ಮುಖಿ ಡಿಕ್ಕಿಯಿಂದ ಆಗಿರುತ್ತದೆ ಎಂದರೆ ಸರಿ. ನನ್ನ ಗಂಡನ ತಪ್ಪಿ ನಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಕೆಎ-32 ಇಕೆ-9796 ರ ತಪ್ಪಿ ನಿಂದ ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ.

ನನ್ನ ಗಂಡ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಬಗ್ಗೆ ಮತ್ತು ಆತನು ಪ್ರತಿ ತಿಂಗಳು ರೂ.30 ಸಾವಿರ ಸಂಬಳ ಪಡೆಯುತ್ತಿದ್ದ ಬಗ್ಗೆ ತೋರಿಸಲು ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿ. ನನ್ನ ಗಂಡ ಚೆಟ್ಟಿನಾಡ ಕಂಪನಿಯಲ್ಲಿ ಕೆಲಸ ಮಾಡುತ್ತ ಪ್ರತಿ ತಿಂಗಳು ರೂ.30 ಸಾವಿರ ಸಂಬಳ ಪಡೆಯುತ್ತಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಅಪಘಾತದ ಕಾಲಕ್ಕೆ ನನ್ನ ಗಂಡನ ವಯಸ್ಸು 40 ಇತ್ತು. ಅದನ್ನು ತೋರಿಸಲು ಯಾವುದೇ ದಾಖಲಾತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿ. ನನ್ನ ಗಂಡ ಆಧಾರ ಕಾರ್ಡ, ಮತ್ತಿತರ ದಾಖಲಾತಿಗಳು ಕಳೆದಿರುತ್ತವೆ. ನನ್ನ ಗಂಡನ ವಯಸ್ಸು 45 ಕ್ಕಿಂತ ಹೆಚ್ಚು ಇತ್ತು ಎಂದರೆ ಸರಿಯಲ್ಲ. ಆ ಕಾರಣದಿಂದ ಆತನ ಆಧಾರ ಕಾರ್ಡನ್ನು ಕಳೆದು ಹೋಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2ನೇ ಅರ್ಜಿದಾರರ ಮದುವೆ ಆಗಿರುವುದಿಲ್ಲ. 2 ಮತ್ತು 3ನೇ ಅರ್ಜಿದಾರರು ಶಾಲೆ ಕಲಿಯುತ್ತಿರುವ ಬಗ್ಗೆ ತೋರಿಸಲು ನಾನು ಯಾವುದೇ ದಾಖಲಾತಿಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿ. 4ನೇ ಅರ್ಜಿದಾರರು ಮೃತನ ಅವಲಂಭಿತ ವ್ಯಕ್ತಿ ಅಲ್ಲ ಎಂದರೆ ಸರಿಯಲ್ಲ. ಪ್ರಸ್ತುತ ಅರ್ಜಿಯನ್ನು 336 ದಿನಗಳ ವಿಳಂಬ ಮಾಡಿ ದಾಖಲಿಸಿದ್ದೇವೆ ಎಂದರೆ ನನಗೆ ಗೊತ್ತಿಲ್ಲ ನಾವು ದುಖಃದಲ್ಲಿದ್ದೆವು. ಅಪಘಾತವು ನನ್ನ ಗಂಡನ ತಪ್ಪಿ ನಿಂದ ಆಗಿದ್ದರು ಪರಿಹಾರ ಪಡೆಯಲು ಸುಳ್ಳು ಪರಿಹಾರ ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರೆದ ಮುಖ್ಯ ವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ,
ಚಿಂಚೋಳಿ.